ಅ) ಸೇಡಂ ತಾಲ್ಲೂಕಿನ ವ್ಯಾಪ್ತಿಯಲ್ಲಿ ಇರುವ ಈ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳಿಗೆ ಗುತ್ತಿಗೆಗಳು ಸ್ವೀಕೃತವಾಗಿದ್ದು ಶೀಘ್ರದಲ್ಲಿ ತೀರ್ಮಾನಿಸಿ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.

ಆ) ಮಲಖೇಡ - ರಿಬ್ಬನ್‌ಪಲ್ಲಿ ರಸ್ತೆಯ ಕಿ.ಮೀ. 92ರಿಂದ 122ರವರೆಗೆ ಕಾಮಗಾರಿಗಳಿಗೆ ಗುತ್ತಿಗೆ ಕರೆದಿದ್ದು ಈ ಭಾಗಕ್ಕೆ ಟೆಂಡರಿಗಿಟ್ಟ ಹಣ 218.18 ಲಕ್ಷ ರೂಗಳು. ಉಳಿದ ಭಾಗವಾದ 122 ಕಿ.ಮೀ.ನಿಂದ 140.20 ಕಿ.ಮೀ.ವರೆಗಿನ (ಆಂಧ್ರ ಪ್ರದೇಶ ಗಡಿ) ಕಾಮಗಾರಿಗೆ ವಿವರವಾದ ಅಂದಾಜು ಪತ್ರಿಕೆ ತಯಾರಿಸಲಾಗುತ್ತಿದ್ದು ಶೀಘ್ರದಲ್ಲಿ ಗುತ್ತಿಗೆಗಳನ್ನು ಕರೆಯಲಾಗುವುದು.

ಇ) ಸ್ವೀಕೃತವಾಗಿರುವ ಗುತ್ತಿಗೆಗಳ ಬಗ್ಗೆ ಶೀಘ್ರದಲ್ಲಿ ನಿರ್ಣಯ ತೆಗೆದುಕೊಂಡು ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.

ಈ) ಈ ಕಾಮಗಾರಿಗಳನ್ನು 91-92 ನೇ ಸಾಲಿನಲ್ಲಿಯೂ ಸೂಕ್ತ ಅನುದಾನ ನಿಗದಿಪಡಿಸಿ ಮುಂದುವರೆಸಲಾಗುತ್ತದೆ.

ಉ) ರಸ್ತೆಗಳ ದುರಸ್ಥಿಗಾಗಿ ಇರುವ ನಿರ್ವಹಣಾ ಅನುದಾನದಲ್ಲಿ ಮೇಲ್ಕಂಡ ರಸ್ತೆಗಳನ್ನು ನಿರ್ವಹಿಸಲಾಗುತ್ತಿದೆ.

ಊ) 90-91 ನೇ ಸಾಲಿನಲ್ಲಿ ಈ ರಸ್ತೆಗಳ ದುರಸ್ತಿಗಾಗಿ ವೆಚ್ಚವಾಗಿರುವ ವಿವರ ಕೆಳಕಂಡಂತೆ ಇದೆ.

1.	ಪಾಗ್ದಂ - ರಿಬ್ಬನ್ ಪಲ್ಲಿ ರಸ್ತೆ	1.70 ಲಕ್ಷ ರೂ.ಗಳು
2.	ಸೇಡಂ - ಕೊಡ್ಲಾ ರಸ್ತೆ	2.53 ಲಕ್ಷ ರೂ.ಗಳು
3.	ಮಲಖೇಡ್ - ರಾಜಶ್ರೀ ಸಿಮೆಂಟ್ ಕ್ರಾಸ್‌ವರೆಗೂ.	0.24 ಲಕ್ಷ ರೂ.ಗಳು.
		4.47 ಲಕ್ಷ ರೂ.ಗಳು.

ಋ) ರಸ್ತೆಗಳ ದುರಸ್ತಿಗಾಗಿ ಇರುವ ನಿರ್ವಹಣೆ ಅನುದಾನದಲ್ಲಿ ಮೇಲ್ಕಂಡ ರಸ್ತೆಗಳನ್ನು ನಿರ್ವಹಿಸಲಾಗುತ್ತಿದೆ.

ಹೇಮಾವತಿ ಕಾಲುವೆ ಕಾಮಗಾರಿ ಕೆಲಸಗಳ ಬಗ್ಗೆ.

1620 - ಶ್ರೀ ಆರ್. ನಾರಾಯಣ್ (ಬೆಳ್ಳಾವಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೇಮಾವತಿ ಜಲಾಶಯ ಯೋಜನೆಯಲ್ಲಿ ತುಮಕೂರು ಜಿಲ್ಲೆ ವ್ಯಾಪ್ತಿಯಲ್ಲಿ ಬರುವ ಕಾಲುವೆ ಕಾಮಗಾರಿ ಕೆಲಸಗಳು ಮಂದಗತಿಯಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇದನ್ನು ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು)

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಧಾರವಾಡ ಜಿಲ್ಲೆಯ ಪ್ರವಾಸಿ ಕೇಂದ್ರಗಳ ಅಭಿವೃದ್ಧಿ

1621-ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ) :ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯಲ್ಲಿರುವ ಪ್ರವಾಸಿ ಕೇಂದ್ರಗಳು ಯಾವುವು?